ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 5, November-December 2025, Pp. 62-66
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬಸವರಾಜ ಕಟ್ಟೀಮನಿ ಅವರ ಅಜ್ಞಾತವಾಸಿ ಕಥೆಯಲ್ಲಿ ನಾಗಮ್ಮನ ಪಾತ್ರದ ವೈಶಿಷ್ಟ್ಯತೆ

**ಡಾ. ಉಮೇಶ್ ಎಂ.ಆರ್**
ಕನ್ನಡ ಸಹಾಯಕ ಪ್ರಾಧ್ಯಾಪಕ, ದಯಾನಂದ ಸಾಗರ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,
ಕುಮಾರಸ್ವಾಮಿ ಬಡಾವಣೆ, ಬೆಂಗಳೂರು

**Abstract:**
*ಸಾಹಿತ್ಯ ಮಾನವನೊಡನೆ ಸಾಮಾಜಿಕವಾದಂತಹ ಸಂಬಂಧವನ್ನು ಬೆಸೆದುಕೊಂಡಿದೆ. ಮಾನವನ ಜೀವನದಲ್ಲಿ ನಡೆದ ಘಟನೆಗಳಿಗೆ ಸಂಬಂಧಿಸಿದಂತೆ ಅನುಭವ ಸಾಹಿತ್ಯದ ಕೃತಿಗಳ ಮೂಲಕವಾಗಿ ರೂಪತಾಳಿತು. ಹಾಗಾಗಿ ಸಾಹಿತ್ಯ ಜನಪರವಾದಂತ ಕಾಳಜಿಯನ್ನು ಹೊಂದುವುದಕ್ಕೆ ಸಾಧ್ಯವಾಯಿತು. 19ನೇ ಶತಮಾನದಲ್ಲಿ ಇಂಗ್ಲೆಂಡ್‌ನಲ್ಲಿ ಆದ ಕೈಗಾರಿಕಾ ಕ್ರಾಂತಿಯಿಂದ ಹೊಸ ಹೊಸ ಯಂತ್ರಗಳು ಬೆಳಕಿಗೆ ಬಂದವು. ಅದರ ಫಲವಾಗಿ ಭಾರತೀಯರ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಯಾಗ ತೊಡಗಿದವು. ಹಾಗೆಯೇ ಇಂಗ್ಲಿಷ್ ಶಿಕ್ಷಣವು ಭಾರತೀಯರಿಗೆ ಹೊಸ ಹೊಸ ಚಿಂತನೆಗಳನ್ನು ಮೂಡಿಸುವುದಕ್ಕೆ ಅನುವು ಮಾಡಿಕೊಟ್ಟಿತು. ಈ ಎಲ್ಲಾ ಅಂಶಗಳು ಭಾರತೀಯರ ಆಲೋಚನಾ ಕ್ರಮದ ಮೇಲೆ ಪರಿಣಾಮಗಳನ್ನು ಬೀರಿದವು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಬಸವರಾಜ ಕಟ್ಟೀಮನಿ ಅವರ ಅಜ್ಞಾತವಾಸಿ ಕಥೆಯಲ್ಲಿ ನಾಗಮ್ಮನ ಪಾತ್ರದ ವೈಶಿಷ್ಟ್ಯತೆಯನ್ನು ಕುರಿತು ಚರ್ಚಿಸಲಾಗಿದೆ. ಪ್ರಗತಿಶೀಲ ಕಾಲಘಟ್ಟದ ಪ್ರಮುಖ ಲೇಖಕರಲ್ಲಿ ಬಸವರಾಜ ಕಟ್ಟೀಮನಿ ಅವರು ಒಬ್ಬರು. ಪ್ರಗತಿಶೀಲ ಕಾಲದ ಆಶಯದ ಹಿನ್ನೆಲೆಯಲ್ಲಿ ರಚಿತವಾದ ಅಜ್ಞಾತವಾಸಿ ಕಥೆಯು ಇವರ ಪ್ರಮುಖ ಕಥೆಗಳಲ್ಲಿ ಒಂದಾಗಿದೆ.*

**Keywords:** *ಕನ್ನಡ ಸಾಹಿತ್ಯ, ಸಣ್ಣಕಥೆ, ಬಸವರಾಜ ಕಟ್ಟೀಮನಿ, ಅಜ್ಞಾತವಾಸಿ, ನಾಗಮ್ಮನ*

## ಪೀಠಿಕೆ

ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತಗಳು' ಎಂಬ ಕೃತಿ ನವೋದಯ (ರೊಮ್ಯಾಂಟಿಕ್) ಸಾಹಿತ್ಯಕ್ಕೆ ನಾಂದಿಯಾಯಿತು. ಇದರ ಪ್ರವೇಶದಿಂದಾಗಿ ಇದುವರೆಗೆ ಧರ್ಮಕ್ಕೆ ಮೀಸಲಾಗಿದ್ದ ಸಾಹಿತ್ಯ ಚಿಂತನೆಗಳಲ್ಲಿ ಜನಪರವಾದಂತಹ ನಿಲುವು ಕಾಣತೊಡಗಿತು. ಪರಂಪರಾಗತ ಮೌಢ್ಯಗಳು ಅಳಿಸಿ ಹೋಗಿ, ಜನ ಸಾಮಾನ್ಯರ ಬದುಕಿನ ಆಶಯಕ್ಕೆ ತಕ್ಕಂತೆ ಸಾಹಿತ್ಯ ಕೃತಿಗಳು ರಚನೆಯಾಗ ತೊಡಗಿದವು. ಈ ಹಿನ್ನೆಲೆಯ ಉದ್ದೇಶದೊಂದಿಗೆ ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧಗಳು ಬೆಳಕಿಗೆ ಬಂದವು.

ಕಥೆ ಎಂಬ ಪದ 'ಹೇಳು' ಎಂಬ ಧಾತುವಿನಿಂದ ಹುಟ್ಟಿದೆ. ಪ್ರಾಚೀನ ಭಾರತದಲ್ಲಿ 'ಕಥಾ' ಶಬ್ದದ ಪ್ರಥಮ ಪ್ರಯೋಗ ವೇದಗಳ ಕಾಲದಲ್ಲಿ ಕಂಡುಬರುತ್ತದೆ. ಸಣ್ಣಕಥೆ ಎಂಬ ಸಾಹಿತ್ಯ ಪ್ರಕಾರ ಹೊಸದಾದರೂ 'ಕಥೆ' ನಮಗೆ ಹೊಸತಲ್ಲ. ಮನುಷ್ಯರು ಹಲವು ವರ್ಷಗಳ ಹಿಂದೆಯೇ ಕಥೆಯನ್ನು ಹೇಳುವ ಪ್ರವೃತ್ತಿಯನ್ನು

**Please cite this article as:** ಉಮೇಶ್, ಎಂ.ಆರ್. (2025). ಬಸವರಾಜ ಕಟ್ಟೀಮನಿ ಅವರ ಅಜ್ಞಾತವಾಸಿ ಕಥೆಯಲ್ಲಿ ನಾಗಮ್ಮನ ಪಾತ್ರದ ವೈಶಿಷ್ಟ್ಯತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(5), 62–66

ರೂಢಿಸಿಕೊಂಡಿದ್ದರು. ಅದಕ್ಕೆ ನಮ್ಮ ಅಜ್ಜಿಯಂದಿರ ಕಥೆಗಳೇ ಪ್ರತ್ಯಕ್ಷ ಸಾಕ್ಷಿಯಾಗಿವೆ. ಒಬ್ಬ ಇನ್ನೊಬ್ಬನಿಗೆ ಘಟನೆಯೊಂದನ್ನು ಸ್ವಾರಸ್ಯಕರವಾಗಿ ಹೇಳುವುದರ ಪ್ರವೃತ್ತಿಯನ್ನು ರೂಢಿಸಿಕೊಂಡಿರುವುದು ಮುಂದೆ ಈ ಪ್ರವೃತ್ತಿ ಕಥೆ ಹೇಳುವ ಪರಂಪರೆಯನ್ನು ಹುಟ್ಟುಹಾಕಿ ಬೆಳೆಸಿತು. ನಂತರದ ದಿನಗಳಲ್ಲಿ ಈ ಪ್ರಕ್ರಿಯೆಯಲ್ಲಿ 'ಸಣ್ಣಕಥೆ' ಇದರಿಂದ ಜನ್ಮ ಪಡೆಯಿತು. ಹಾಗಾಗಿಯೇ ಸಣ್ಣ ಕಥೆಯ ಮೂಲ ಜನಪದರ ಸಾಹಿತ್ಯ ಎಂದು ಗುರುತಿಸಬಹುದು.

ಭಾರತೀಯ ಭಾಷೆಗಳಲ್ಲಿ ಸಣ್ಣಕಥೆಯ ಮೂಲವನ್ನು ಮುಖ್ಯವಾಗಿ ವೇದಗಳು ಹಾಗೂ ಪುರಾಣಗಳಿಂದ ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ರಾಮಾಯಣ ಹಾಗೂ ಮಹಾಭಾರತಗಳಲ್ಲಿ ಕಂಡು ಬರುವ ಉಪಕಥೆಗಳು, ಬುದ್ಧನ ಜಾತಕ ಕಥೆಗಳು, ಭಾರತೀಯ ಜೈನ ಪುರಾಣಗಳಲ್ಲಿ ಗೋಚರಿಸುವ ಕಥೆಗಳು. ಕನ್ನಡದ 'ವಡ್ಡಾರಾಧನೆ' ಈ ನಿಟ್ಟಿನಲ್ಲಿ ಹೆಸರಿಸಬಹುದಾದವು ಗಳಾಗಿವೆ. ಆಧುನಿಕ ಸಂದರ್ಭದಲ್ಲಿ ಮೊದಲಿಗೆ ಬಂಗಾಳಿ ಭಾಷೆಯಲ್ಲಿ ಸಣ್ಣಕಥೆ ರಚನೆಯಾಗಿದೆ.

'ಸಣ್ಣಕಥೆ' ಎಂಬ ಹೆಸರು ಬಂದಿದ್ದು ಪಾಶ್ಚಾತ್ಯರಿಂದ. ಇಂಗ್ಲಿಷ್‌ನ 'Short Story' ಪದಕ್ಕೆ ಸಂವಾದಿಯಾಗಿ ಈ ಪದ ಬಳಕೆಗೆ ಬಂದಿದೆ. 1900ರಲ್ಲಿ 'ಸುಹಾಸಿನಿ' ಪತ್ರಿಕೆಯಲ್ಲಿ ಪ್ರಕಟವಾದ ಪಂಜೆ ಅವರ 'ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕ ತಂದೆ' ಕಥೆಗಳನ್ನು ಕನ್ನಡದ ಮೊದಲ ಸಣ್ಣ ಕಥೆಗಳೆಂದು ಗುರುತಿಸಲಾಗಿದೆ. ಈ ಎರಡೂ ಕಥೆಗಳು ಸಾಮಾಜಿಕ ಸಂಗತಿಯನ್ನು ಒಳಗೊಂಡು ರಂಜನೀಯವಾಗಿ ಮೂಡಿ ಬಂದಿವೆ. ಪಂಜೆ ಅವರ ನಂತರ ಮಾಸ್ತಿ ಅವರು ಸಣ್ಣ ಕಥೆಗಳಿಗೆ ಅಡಿಪಾಯವನ್ನು ಹಾಕಿದರು. 'ಸಣ್ಣಕಥೆಗಳ ಜನಕ' ಎಂದೇ ಹೆಸರು ಗಳಿಸಿಕೊಂಡರು. ಕಮಲಾಪುರದ ಹೊಟ್ಲಿನಲ್ಲಿ, ಮೊಸರಿನ ಮಂಗಮ್ಮ, ಭಾರತ ಶ್ರವಣ ಮುಂತಾದ ಕಥಾಸಂಕಲನಗಳನ್ನು ಹೊರ ತಂದರು. ಅವರ ಕಥೆಗಳಿಗೆ ಬಡತನ, ಅನಕ್ಷರತೆ, ಮೌಢ್ಯ, ದಾಸ್ಯ, ದಾರಿದ್ರ್ಯ, ಸ್ವಾರ್ಥ, ಸಂಘರ್ಷ, ಸಾಮಾಜಿಕ ಹುಳುಕುಗಳು ಕಥಾವಸ್ತುಗಳಾದವು.

ಅನಂತರ ಬಂದಂತಹ ಎ.ಆರ್.ಕೃಷ್ಣಶಾಸ್ತ್ರಿ, ಕುವೆಂಪು, ಆನಂದಕಂದ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅಶ್ವತ್ಥ ಇನ್ನು ಮುಂತಾದ ಕಥೆಗಾರರು 'ನವೋದಯ' ಲಕ್ಷಣದ ಹಿನ್ನೆಲೆಯಲ್ಲಿ ಕಥೆಗಳನ್ನು ಬರೆಯ ತೊಡಗಿದರು.

ಕನ್ನಡದ ಪ್ರಗತಿಶೀಲ ಬರಹಗಾರರಲ್ಲಿ ಸಣ್ಣಕಥೆಯನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಬಳಸಿಕೊಂಡ ಲೇಖಕರ ಸಂಖ್ಯೆ ಅತಿ ಕಡಿಮೆ. ಅ.ನ.ಕೃ. ಮತ್ತು ತ.ರಾ.ಸು ಅವರು ಪ್ರಯೋಗಶೀಲ ದೃಷ್ಟಿಯಿಂದಲೇ ಸಣ್ಣಕಥೆಗಳನ್ನು ಬರೆದವರು. ನಿರಂಜನ, ಚದುರಂಗ, ಕಟ್ಟೀಮನಿ ಮುಂತಾದವರು ತಮ್ಮ ವೈಯಕ್ತಿಕ ಸುಖ–ದುಃಖ, ಪ್ರೀತಿ–ಪ್ರೇಮ ಇಂಥಹ ಅನುಭವವನ್ನೇ ವ್ಯಕ್ತಗೊಳಿಸಲು ಕಥಾ ಮಾಧ್ಯಮವನ್ನು ಬಳಸಿಕೊಂಡರು.

ಪ್ರಗತಿಶೀಲ ಕಾಲಘಟ್ಟದ ಪ್ರಮುಖ ಲೇಖಕರಲ್ಲಿ ಬಸವರಾಜ ಕಟ್ಟೀಮನಿ ಅವರು ಒಬ್ಬರು. ಪ್ರಗತಿಶೀಲ ಕಾಲದ ಆಶಯದ ಹಿನ್ನಲೆಯಲ್ಲಿ ರಚಿತವಾದ **ಅಜ್ಞಾತವಾಸಿ** ಕಥೆಯು ಇವರ ಪ್ರಮುಖ ಕಥೆಗಳಲ್ಲಿ ಒಂದಾಗಿದೆ. ಬ್ರಿಟೀಷರಿಂದ ಭಾರತವನ್ನು ಮುಕ್ತಗೊಳಿಸುವುದಕ್ಕಾಗಿ ಅನೇಕ ದೇಶ ಭಕ್ತರು ತಮ್ಮ ಕುಟುಂಬವನ್ನು ಬಲಿಕೊಟ್ಟ ಉದಾಹರಣೆಗಳು ಇತಿಹಾಸದಲ್ಲಿ ಸಿಗುತ್ತವೆ. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಅಸಂಖ್ಯ ದೇಶಭಕ್ತರು ಸೆರೆಮನೆವಾಸವನ್ನು ಅನುಭವಿಸಿದ್ದಾರೆ. ಬ್ರಿಟೀಷರು ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಕೊಂಡ ಸಕ್ರೀಯ ಕಾರ್ಯಕರ್ತರನ್ನು ಬೆನ್ನಟ್ಟಿ, ಬಂಧಿಸಿ ಸೆರೆಯಿಟ್ಟು ವಿವಿಧ ಬಗೆಯ ಚಿತ್ರಹಿಂಸೆಗಳನ್ನು ಕೊಡುತ್ತಿದ್ದರು. ಪೊಲೀಸರು ರಾಕ್ಷಸರಂತೆ ವರ್ತಿಸುವ ವಿದ್ರಾವಕ ದೃಶ್ಯವನ್ನು ಕಟ್ಟೀಮನಿ ಅವರ ಅಜ್ಞಾತವಾಸಿ ಕಥೆಯು ಬಿಚ್ಚಿಡುತ್ತದೆ.

ಅಜ್ಞಾತವಾಸಿ ಕಥೆಯಲ್ಲಿ ನಾಗಮ್ಮನ ಪಾತ್ರವನ್ನು ವೈಶಿಷ್ಟ್ಯಪೂರ್ಣವಾಗಿ ಕಥೆಗಾರರು ಚಿತ್ರಿಸಿದ್ದಾರೆ. ಊರಿನ ಸ್ವಾತಂತ್ರ್ಯ ಹೋರಾಟದ ಗಲಭೆಯಲ್ಲಿ ಪೊಲೀಸ್ ಅಧಿಕಾರಿಯು ಮರಣ ಹೊಂದುತ್ತಾನೆ. ಮಾರನೆಯ ದಿನ ಮಿಲಟರಿಯವರು ಬಂದು ಊರಿನ ಎಲ್ಲಾ ಯುವಕರನ್ನು ಬಂಧಿಸುವುದಕ್ಕೆ ತೊಡಗುತ್ತಾರೆ. ಆ ಸಮಯದಲ್ಲಿ ಚೆನ್ನಬಸಪ್ಪ ಹುಟ್ಟೂರನ್ನು ಬಿಟ್ಟು ಅಲೆಮಾರಿಯಾಗಿ ಕಾಡನ್ನು ಸುತ್ತುತ್ತಾ ಪೊಲೀಸರಿಂದ ತಲೆಮರೆಸಿಕೊಂಡಿರುತ್ತಾನೆ. ಇತ್ತ ಪೊಲೀಸಿನವರು ಚೆನ್ನಬಸಪ್ಪನ ಹೆಂಡತಿಯಾದ ನಾಗಮ್ಮಳನ್ನು ಬಂಧಿಸಿ ಊರ ಹೊರಗಿನ ಗುಡಿಸಿಲಿನಲ್ಲಿ ಸೆರೆಹಾಕುವರು. ಪ್ರತಿ ದಿನವೂ ಗಂಡನ ಬಗ್ಗೆ ಸುಳಿವು ನೀಡು ಎಂದು ದರ್ಪದಿಂದ ಕೇಳುವರು. ಅವಳ ಕೋಮಲವಾದ ಶರೀರದ ಮೇಲೆ ಅತ್ಯಾಚಾರ ಮಾಡಿ ಹಿಂಸುತ್ತಿದ್ದರು. ಇಷ್ಟೆಲ್ಲಾ ಚಿತ್ರಹಿಂಸೆ ನೀಡಿದರೂ, ನಾಗಮ್ಮ ಗಂಡನ ಬಗ್ಗೆ ಸುಳಿವು ನೀಡುವುದೇ ಇಲ್ಲ. ರಾತ್ರಿಯ ಸಮಯದಲ್ಲಿ ಏಕಾಂತವಾಗಿ ರಾಮ, ಕೃಷ್ಣ, ಶಿವ ಮುಂತಾದ ದೈವವನ್ನು ನನ್ನನ್ನು ಈ ನರಕದಿಂದ ಪಾರು ಮಾಡು ಎಂದು ಬೇಡಿಕೊಳ್ಳುತ್ತಾ ಇರುವಳು. ಆದರೆ ಆ ದೇವರುಗಳಿಗೂ ಆಕೆಯ ಮೇಲೆ ಕರುಣೆಯೇ ಬರದಿರುವುದು ವಿಧಿಯ ಕ್ರೂರತೆಯಾಗಿದೆ.

ಪ್ರತಿದಿನವೂ ಪೊಲೀಸರು ನಾಗಮ್ಮಗೆ ಚೆನ್ನಾಗಿ ಹೊಡೆದು, ಬಡಿದು ದೇಹದಿಂದ ರಕ್ತ ಸೋರುವವರೆಗೂ ಹಿಂಸೆಯನ್ನು ನೀಡುತ್ತಿದ್ದರು. ಇಷ್ಟೆಲ್ಲಾ ಹಿಂಸೆಯನ್ನು ಅನುಭವಿಸುವುದಕ್ಕೂ ಆಕೆನೂ ಸಿದ್ಧಳಿದ್ದಳು. ಏಕೆಂದರೆ ದೇಶದ ಹಿತಕ್ಕಾಗಿ ಮತ್ತು ಗಂಡನಿಗಾಗಿ. ತಂಗಳು ರೊಟ್ಟಿಯನ್ನು ತಿನ್ನಲಾರದ ಆಕೆಯ ಬಾಯಿಯಿಂದ ಹಲ್ಲುಗಳನ್ನು ಉದುರಿಸಿದ್ದರು. ಒಸಡಿನಿಂದ ರಕ್ತ ಸೊರುತ್ತಿತ್ತು. ಒದೆಯನ್ನೆಲ್ಲಾ ನುಂಗಿಕೊಂಡ ಆಕೆಯ ದೇಹ ಪೊಲೀಸರು ನೀಡುವ ಶಿಕ್ಷೆಗೆ ಒಗ್ಗಿಕೊಂಡಿತ್ತು. ಒಮ್ಮೆ ಅಸಹಾಯಕಳಾಗಿ ***"ದಫೇದಾರ ನಡೆಸಿದ ಕೃತ್ಯದ ಅರಿವಾಯಿತು. ತನ್ನೆಲ್ಲಾ ಉಳಿದಿದ್ದ ಎಲ್ಲಾ ಶಕ್ತಿಯನ್ನೂ ಹಲ್ಲುಗಳಿಗೆ ಒಟ್ಟುಗೂಡಿಸಿ, ಅವನ ಕೈಯನ್ನು ಬಲವಾಗಿ ಕಚ್ಚಿಬಿಡಲಾ ಎನ್ನಿಸಿತು. ನಾಗಮ್ಮನಿಗೆ ನಾಗರಹಾವಿನ ಹಲ್ಲಿನಲ್ಲಿರುವ ವಿಷವಾದರೂ ತನ್ನ ಹಲ್ಲಿನಲ್ಲಿದ್ದಿದ್ದರೆ– ಒಂದು ಕಡಿತಕ್ಕೆ ಉರುಳಿಬಿದ್ದು ಒರಲಿ ಒರಲಿ ಪ್ರಾಣ ಬಿಡುತ್ತಿದ್ದ ಈ ಪಿಶಾಚಿ ಎಂದು ಕೊಂಡಳು.."*** (ಕನ್ನಡ ಸಣ್ಣ ಕಥೆಗಳು, ಜಿ.ಎಚ್.ನಾಯಕ (ಸಂ), ನವಕರ್ನಾಟಕ ಪ್ರಕಾಶನ ಪು.58) ಆದರೆ ವಾಸ್ತವದ ಬದುಕಿನಲ್ಲಿ ಇದು ಸಾಧ್ಯವಾಗುತ್ತಿರಲಿಲ್ಲ! 'ಬಡವನ ಸಿಟ್ಟು ದವಡೆಗೆ ಮೂಲ' ಎಂಬ ಗಾದೆಯ ಮಾತಿನಂತೆ ಆಕೆಯ ಸಿಟ್ಟು ಕೇವಲ ಮನಸ್ಸಿನ ರೋಧನೆ ಮಾತ್ರ ಆಗಿರುತ್ತಿತ್ತು.

ಒಂದು ದಿನ ***"ಹೇಳು ಎಲ್ಲಿದ್ದಾನೆ ಆ ನಿನ್ನ ಗಂಡ? ಭಂಡ ಎಲ್ಲಿ ಅಡಗಿದ್ದಾನೆ ಹೇಡಿಯ ಹಾಗೆ? ಭಂಡ! ಹೇಡಿ! ಅದೂ ತನ್ನ ಗಂಡ! ನಾಗಮ್ಮನ ಸ್ವಾಭಿಮಾನ ಕುದಿದೆದ್ದಿತು. ನೋವು ಸಹಿಸಿ ಸಹಿಸಿ ಕುಗ್ಗಿಹೋದ; ಆದರೂ ಅತ್ಯಂತ ತೀವ್ರವಾದ ದನಿಯಲ್ಲಿ ಗುಡುಗಿದಳು. ಯಾರಿಗೆ ಭಂಡ ಅಂತಿಯೋ ಷಂಡಾ! ಹೆಂಗಸರ ಮ್ಯಾಲೆ ಕೈ ಎತ್ತುವ ನಿಮ್ಮಂಥ ಹೇಡಿಗಳಂಥವನಲ್ಲ ನನ್ನ ಗಂಡ! ಥೂ! ನಿಮ್ಮ ಮುಖಕ್ಕೆ ಬೆಂಕಿ ಹಾಕಲಿ! ನಾಚಿಕೆಯಾಗೋದಿಲ್ಲವೆ ನಿಮಗೆ?"*** (ಅದೇ, ಪುಟ)ಎಂದು ದೇಶ ಭಕ್ತ ಗಂಡನ ಬಗ್ಗೆ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಹಗುರವಾಗಿ ಮಾತನಾಡಿದ ಪೊಲೀಸರಿಗೆ ಪ್ರತ್ಯುತ್ತರವಾಗಿ ನಾಗಮ್ಮ ಹೀಗೆ ಜಾಡಿಸುವಳು. ಈ ಮೂಲಕವಾಗಿ ಕಟ್ಟೀಮನಿ ಅವರು ನಾಗಮ್ಮನ ಪಾತ್ರವನ್ನು ಕೇವಲ ಅಸಹಾಯಕಳನ್ನಾಗಿ ಮಾತ್ರ ಚಿತ್ರಿಸಿಲ್ಲ. ದಿಟ್ಟ ಮಹಿಳೆಯನ್ನಾಗಿ ಚಿತ್ರಿಸಿರುವುದಕ್ಕೆ ಈ ಸಾಲುಗಳು ಮಹತ್ವ ಎನಿಸುವವು.

ಮುಂದಿನ ದಿನಗಳಲ್ಲಿ ನಾಗಮ್ಮನಿಗೆ ಸದಾ ಗಂಡನನ್ನು ನೆನಪಿಸಿಕೊಳ್ಳುತ್ತಾ ಮನಸ್ಸಿನಲ್ಲಿ ಹೀಗೆ ಕೊರಗಲಾರಂಭಿದಳು. ***"ಕತ್ತಲ ರಾತ್ರಿಯಲ್ಲಿ ಹೊರಗಡೆ ಸ್ವಚ್ಛೆಯಾಗಿ ಸಂಚರಿಸುವ ಸರ್ಪಗಳಾದರೂ***

***ಬರಬಾರದೇ ತನ್ನ ಈ ಗುಡಿಸಲಿನ ಸೆರೆಮನೆಯಲ್ಲಿ ಎಂದುಕೊಂಡಿದ್ದಳು ನಾಗಮ್ಮ. ಅವುಗಳ ತೀಕ್ಷ್ಣ ಕಣ್ಣುಗಳ ಹೊಳಪನ್ನು ಕಂಡು ತಾನು ಅವನ್ನು ಗುರುತಿಸಿಯಾಳು. ದರ್ಶನ ಕೊಡಲು ಬಂದ ದೇವರನ್ನು ಸ್ವಾಗತಿಸುವಂತೆ ತಾನು ಅವನ್ನು ಸ್ವಾಗತಿಸಿಯಾಳು. ಸಂತೋಷದಿಂದ ನಗುನಗುತ್ತಾ ಅವುಗಳ ಹೆಡೆಗೆ ಕೈಹಾಕಿಯಾಳು. ಅವುಗಳ ವಿಷಯುಕ್ತ ಹಲ್ಲು ಕೈಗೆ ಚುಚ್ಚಿದಾಗ ಹರ್ಷದಿಂದ ಕೇಕೆ ಹಾಕಿಯಾಳು..! ಹಾವುಗಳು ಬರದಿದ್ದರೆ ಹೋಗಲಿ. ಹಿಂದೊಮ್ಮೆ ತಮ್ಮ ಹಳ್ಳಿಯ ತುಂಬೆಲ್ಲಾ ತಾಂಡವ ನೃತ್ಯಗೈದ ಪ್ಲೇಗಿನ ಮಾರಿಯಾದರೂ ಏಕೆ ಬರಬಾರದೋ ತನ್ನ ಬಳಿಗೆ? ರೈತರ ಮನೆಗಳನ್ನೆಲ್ಲಾ ಸುಟ್ಟು ಬೂದಿಮಾಡಿದ ಆ ಅಗ್ನಿಜ್ವಾಲೆ ಅದೇಕೆ ಸುಳಿಯಲಿಲ್ಲವೋ ಈ ಗುಡಿಸಲಿನ ಬಳಿಗೆ? ಆ ಜ್ವಾಲೆಯನ್ನಿತ್ತ ಹಾರಿಸಿ ತರಲು ಗಾಳಿಗೂ ಕೂಡ ಮನಸು ಬರಲಿಲ್ಲವೇ? ನಿಸರ್ಗವೆಲ್ಲಾ ಒಂದುಗೂಡಿ ಭೀಕರ ಸಂಚು ಹೂಡಿದೆಯೇನೋ ತನ್ನ ವಿರುದ್ಧವಾಗಿ?"*** (ಅದೇ, ಪು.59)ಎಂದು ಹಲುಬಿದಳು. ಆದರೆ ವಾಸ್ತವದಲ್ಲಿ ಇದ್ಯಾವುದೂ ಸಾಧ್ಯವಾಗದೇ ಹೋಯಿತು. ಪೊಲೀಸರು ನೀಡುವ ಬಗೆ ಬಗೆಯ ಚಿತ್ರಹಿಂಸೆಗೆ ಆಕೆಯ ದೇಹ ದಿನದಿಂದ ದಿನಕ್ಕೆ ಛಿದ್ರ ಛಿದ್ರವಾಗುವುದಕ್ಕೆ ಆರಂಭಿಸಿತು. ಒಂದು ದಿನ ರಾತ್ರಿ ಒಬ್ಬಳೇ ಸೆರೆಮನೆಯಲ್ಲಿರುವಾಗ ಕುಳಿತುಕೊಂಡು ***"ಎಂದಿಗೆ ಮುಗಿಯುವುದೋ ಈ ಪೊಲೀಸ್ ರಾಜ್ಯ? ಎಂದು ಇವರೆಲ್ಲಾ ಇಲ್ಲಿಂದ ಹೊರಡುವರೋ? ಎಂದು ಬರುತ್ತಾನೋ ನನ್ನೊಡೆಯ? ನಾನೆಂದು ಅವನ್ನ ನೋಡುತ್ತೇನೋ? ಇಲ್ಲ ಹೀಗೆ ಈ ಪೊಲೀಸರ ಹಿಂಸೆಗೆ ಬಲಿಯಾಗಿ ಪ್ರಾಣ ನೀಗುತ್ತೇನೇನೊ? ಅಯ್ಯೋ ನನ್ನೊಡೆಯಾ, ಎಲ್ಲಿದ್ದೀಯೋ ನೀನು? ಒಂದು ಸಲವಾದರೂ ಮಕ ತೋರಿಸು. ನಿನ್ನ ಮುದ್ದು ಮುಕ ನೋಡಿ ನಿನ್ನ ತೊಡೆ ಮೇಲೆ ತಲೆ ಇಟ್ಟು ಪ್ರಾಣ ಬಿಡ್ತೇನೆ. ಈ ಪಶುಗಳಿಂದ ಹೊಲೆಗೆಟ್ಟ ಈ ಹಾಳು ದೇಹ ನೀಗ್ತೇನೆ; ಎಂದು ಹಲುಬಿದಳು ನಾಗಮ್ಮ."*** (ಅದೇ, ಪುಟ) ಬ್ರಿಟೀಷ್ ಅಧಿಕಾರಯುತವಾದ ಸಾಮ್ರಾಜ್ಯ ಪತನವಾಗಬೇಕು. ಪ್ರಜಾಪ್ರಭುತ್ವದ ವ್ಯವಸ್ಥೆ ಜಾರಿಗೆ ಬರಬೇಕೆಂಬ ಆಶಯವನ್ನು ನಾಗಮ್ಮ ಹೊಂದಿದ್ದಳು. ಈ ಮೂಲಕವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆಯಾಗಲೇಬೇಕೆಂಬ ಕನಸನ್ನು ಹೊತ್ತುಕೊಂಡ ವೀರ ಮಹಿಳೆ ನಾಗಮ್ಮನಾಗಿದ್ದಾಳೆ.

ದೇಶಭಕ್ತ ಗಂಡನ ಮುಖದ ದರ್ಶನವಾದನಂತರವೇ ಪ್ರಾಣವನ್ನು ಬಿಡಬೇಕೆಂದು ನಾಗಮ್ಮ ಮನಸ್ಸಿನಲ್ಲಿ ತೀರ್ಮಾನಿಸಿದ್ದಳು. ಊರಿನ ಕರಿಯಜ್ಜನ ಮೂಲಕವಾಗಿ ಅಜ್ಞಾತವಾಸಿಯಾಗಿ ಕಾಡಿನಲ್ಲಿ ಅವಿತುಕೊಂಡಿದ್ದ ಚೆನ್ನಬಸಪ್ಪನಿಗೆ, ಹೆಂಡತಿಯನ್ನು ಬಂಧಿಸಿದ್ದ ಸುದ್ಧಿ ತಿಳಿಯುವುದು. ಹೆಂಡತಿಯನ್ನು ನೋಡಲೇಬೇಕೆಂದು ಚೆನ್ನಬಸಪ್ಪ ಮಧ್ಯರಾತ್ರಿಯಲ್ಲಿ ಹೆಂಡತಿ ಇರುವ ಸೆರೆಮನೆಗೆ ಬಂದನು. ಆಕೆಯ ಧಾರುಣವಾದ ಸ್ಥಿತಿ ಹಾಗೂ ನಾಗಮ್ಮನ ದೇಹದ ಸ್ಥಿತಿಯನ್ನು ಲೇಖಕರು ವಿವರಿಸುವುದು ಹೀಗಿದೆ; ***"ಗೋರಿಗೆ ಹಾಕಲು ಸಿದ್ಧವಾಗಿ ನಿಂತಿದ್ದ ಪತ್ನಿಯ ನಗ್ನಶರೀರವನ್ನು ಅಸ್ಪಷ್ಟವಾಗಿ ತೋರಿತು. ಆ ಕ್ಷೀಣ ಬೆಳಕು ಹಲವಾರು ಕಡೆ ಉಂಟಾದ ಗಾಯಗಳಿಂದ, ಹೆಪ್ಪುಗಟ್ಟಿದ್ದ ರಕ್ತದಿಂದ, ಅಲ್ಲಲ್ಲಿ ಉಬ್ಬಿದ ಚರ್ಮದಿಂದ, ಅಲ್ಲಲ್ಲಿ ಬಿದ್ದ ತೂತುಗಳಿಂದ ವಿದ್ರೂಪವಾದ ಆ ಶರೀರ! ಅದು ತನ್ನ ಪ್ರೀತಿಯ ಪತ್ನಿಯದು! ಮದುವೆಯಾದ ಎಂಟು ವರ್ಷಗಳಿಂದ ತಾನು ಅತ್ಯಂತ ಅಕ್ಕರೆಯಿಂದ ಸಾಕಿ ಬೆಳಸಿದ ತನ್ನ ಪ್ರಾಣಪ್ರಿಯ ನಾಗುವಿನದು! ಅವನ ಮೈಯಲ್ಲವೂ ನಡುಗತೊಡಗಿತು. ಎಂಥ ಹೃದಯಭೇಧಕ ದೃಶ್ಯ ಅದು! ಅವಳ ಹತ್ತಿರ ಕುಳಿತುಕೊಂಡು ಚೆನ್ನಬಸಪ್ಪ ಅವಳ ಕೆನ್ನೆಗಳನ್ನು ಮಮತೆಯಿಂದ ಸವರುತ್ತಾ, ಪಿಸುದನಿಯಲ್ಲಿ ಕೂಗಿದ. ನಾಗೂ, ನನ್ನ ನಾಗೂ... ಶವದಂತೆ ನಿಶ್ಚಲವಾಗಿ ಬಿದ್ದುಕೊಂಡಿದ್ದ ಆ ಅಭಾಗಿನಿಗೆ ಎಚ್ಚರವಾಯಿತು. ಚಿರಪರಿಚಿತವಾದ ಆ ದನಿಯನ್ನಾಕೆ ಆಗಲೇ ಗುರುತಿಸಿದ್ದಳು. ತುಂಬಾ ಕಷ್ಟದಿಂದ ಕಣ್ಣು ತೆರೆದು ಗಂಡನ ಮುಖವನ್ನೊಮ್ಮೆ ನಿಟ್ಟಿಸಿ ನೋಡಿದಳು."***

(ಅದೇ, ಪು.66) ಗಂಡನನ್ನು ನೋಡಿದ ಕೋಡಲೇ ನೀವು ಈ ಪಿಶಾಚಿಗಳ ಕೈಗೆ ಸಿಗಬೇಡಿ, ಇಲ್ಲಿಂದ ಕೂಡಲೇ ಹೊರಟು ಹೋಗಿ ಎಂದು ಹೇಳಿದಳು. ಆಕೆಯ ಕೊನೆಯ ಆಸೆಯಂತೆ ಗಂಡನ ತೊಡೆಯ ಮೇಲೆ ತೆಲೆಯನ್ನು ಇಟ್ಟು ಪ್ರಾಣ ಬಿಡುವುದರೊಂದಿಗೆ ಮರಣ ಹೊಂದಿದಳು.

ಒಟ್ಟಾರೆಯಾಗಿ ಅಜ್ಞಾತವಾಸಿ ಕಥೆಯಲ್ಲಿ ನಾಗಮ್ಮನ ಪಾತ್ರವನ್ನು ಮನೋಜ್ಞವಾಗಿ ಕಟ್ಟೀಮನಿ ಅವರು ಚಿತ್ರಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಗ್ರಾಮೀಣ ಮಹಿಳೆಯರು ಪ್ರತ್ಯಕ್ಷವಾಗಿ ಅಧಿಕಾರಿಗಳ ವಿರುದ್ಧ ಹೋರಾಟವನ್ನು ಮಾಡದಿದ್ದರೂ, ಪರೋಕ್ಷವಾಗಿ ದೇಶದ ಹಿತಕ್ಕಾಗಿ ತಮ್ಮ ಪ್ರಾಣವನ್ನು ನೀಡಿರುವ ಅನೇಕ ಸಾಕ್ಷಿಗಳು ನಮಗೆ ದೊರಕುತ್ತವೆ. ಅಂಥಹ ವೀರ ಮಹಿಳೆಯರ ಸಾಲಿಗೆ ನಾಗಮ್ಮನೂ ಸೇರುವಳು. ನಾಗಮ್ಮನ ದೇಶ ಪ್ರೀತಿ, ದೇಶ ಭಕ್ತ ಗಂಡನ ಬಗೆಗಿನ ಅಭಿಮಾನ ಇವೆಲ್ಲವೂ ನಮ್ಮೆಲ್ಲರಿಗೂ ಆದರ್ಶವಾಗಬೇಕೆಂಬ ಆಶಯವನ್ನು ನಾಗಮ್ಮನ ಪಾತ್ರ ಸಮಾಜಕ್ಕೆ ತಿಳಿಸುವುದು.

**ಪರಾಮರ್ಶನ/ಆಕರ ಗ್ರಂಥಗಳು**


- ನಾಯಕ ಜಿ.ಎಚ್ (ಸಂ.). (2018). *ಕನ್ನಡ ಸಣ್ಣ ಕಥೆಗಳು.* ನ್ಯಾಷನಲ್ ಬುಕ್ ಟ್ರಸ್ಟ್
- ರಾಘವೇಂದ್ರ, ಎಚ್.ಎಸ್. (2018). *ಪ್ರಗತಿಶೀಲತೆ.* ಅಭಿನವ ಪ್ರಕಾಶನ
- ಸಿದ್ದಲಿಂಗಯ್ಯ, ಜಿ.ಎಸ್. ಮತ್ತು ಎಂ.ಎಚ್. ಕೃಷ್ಣಯ್ಯ. (ಸಂ.). (2016). *ಸಾಲುದೀಪಗಳು.* ಸಾಹಿತ್ಯ ಅಕಾಡೆಮಿ.